# ಯೋಗ ನರಸಿಂಹ ಸ್ವಾಮಿ ದೇವಸ್ಥಾನದ ರಾಜಗೋಪುರ ನಿರ್ಮಾಣಕ್ಕೆ ಉತ್ತರ ಕಲ್ಲು ಪ್ರತಿಷ್ಠಾಪನೆ ಸಿದ್ಧತೆ



**ತಾಂಡವಪುರ:** ಮೈಸೂರಿನ ವಿಜಯ ನಗರದ ಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಪರಮಪೂಜ್ಯ ಬಾಷ್ಯಂ ಸ್ವಾಮೀಜಿಯವರ ಕನಸಾಗಿರುವ ರಾಜಗೋಪುರ ನಿರ್ಮಾಣ ಕಾರ್ಯ ಭಕ್ತರ ಸಹಕಾರದಿಂದ ಪ್ರಗತಿಯಲ್ಲಿದೆ.

ಫೆಬ್ರವರಿ 19ರಂದು ಗುದ್ದಲಿ ಪೂಜೆ ಯೊಂದಿಗೆ ಆರಂಭಗೊಂಡ ಈ ಮಹತ್ವದ ಯೋಜನೆಯ ಅಡಿಪಾಯ ಕಾಮಗಾರಿ ಈಗಾಗಲೇ ಪೂರ್ಣಗೊಂಡಿದ್ದು, ಕಲ್ಲಿನ ಕೆಲಸ ಆರಂಭವಾಗಿದೆ.

ಇಂದು ರಾಜಗೋಪುರದ ಉತ್ತರಕಲ್ಲು ಕಲ್ಲನ್ನು ಪರಮಪೂಜ್ಯ ಬಾಶ್ಯಂ ಸ್ವಾಮೀ-ಜಿಯವರ ಅಮೃತ ಹಸ್ತದಿಂದ ಪೂಜಿಸಲ್ಪಟ್ಟು ಕಾಮಗಾರಿಗೆ ಚಾಲನೆ ನೀಡಲಾಯಿತು,

ಕಲ್ಲಿನ ಕೆಲಸವು ಮುಂದಿನ ಐದು ರಿಂದ ಆರು ತಿಂಗಳೊಳಗೆ ಪೂರ್ಣಗೊಳ್ಳುವ ನಿರೀಕ್ಷೆ ಯಿದೆ. ಬಳಿಕ ವಿಗ್ರಹಗಳ ನಿರ್ಮಾಣ ಹಾಗೂ ಇಟ್ಟಿಗೆ-ಸಿಮೆಂಟ್ ಬಳಸಿ ಗೋಪುರ ನಿರ್ಮಾಣದ ಮುಂದಿನ ಹಂತದ ಕಾಮಗಾರಿ ಆರಂಭವಾಗಲಿದ್ದು, ಸಂಪೂರ್ಣ ಕಾಮಗಾರಿ ಪೂರ್ಣಗೊಳ್ಳಲು ಸುಮಾರು ಎರಡು ರಿಂದ ಮೂರು ವರ್ಷಗಳ ಕಾಲಾವಕಾಶ ಬೇಕಾಗಬಹುದು.

ಸುಮಾರು 80 ರಿಂದ 90 ಅಡಿ ಎತ್ತರದ ರಾಜಗೋಪುರ ನಿರ್ಮಾಣ ಮಾಡುವ ಸಂಕಲ್ಪವನ್ನು ಬಾಷ್ಯಂ ಸ್ವಾಮೀ-ಜಿಯವರು ಹೊಂದಿದ್ದಾರೆ. ಭಕ್ತಾದಿಗಳ ಸಹಕಾರ ಹಾಗೂ ದಾನಿಗಳ ನೆರವಿನಿಂದ ಆರಂಭವಾಗಿರುವ ಈ ಯೋಜನೆ ಯಾವುದೇ ಅಡೆತಡೆಗಳಿಲ್ಲದೆ ಯಶಸ್ವಿಯಾಗಿ ಪೂರ್ಣಗೊಂಡು, ಕುಂಭಾಭಿಷೇಕ ದೊಂದಿಗೆ ಸಮಾಪ್ತಿಗೊಳ್ಳಬೇಕು ಎಂಬುದು ಎಲ್ಲರ ಆಶಯವಾಗಿದೆ.

ಕಾರ್ಯಕ್ರಮದಲ್ಲಿ ಪರಮಪೂಜ್ಯ ಬಾಶ್ಯಂ ಸ್ವಾಮೀಜಿಯವರು, ವಿವಿಧ ಗಣ್ಯರು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಲೋಕನಾಥ್ , ಶ್ರೀನಿವಾಸನ್ ಗುರೂಜೀ , ಗಣ್ಯರು,

ಪ್ರಮುಖ ದಾನಿಗಳು ಹಾಗೂ ಅನೇಕ ಭಕ್ತರು ಭಾಗವಹಿಸಿ ಆಶೀರ್ವಾದ ಪಡೆದರು. ದೇವಸ್ಥಾನದ ಈ ಮಹತ್ವದ ಯೋಜನೆ ಸಮಾಜಕ್ಕೆ ಮಾದರಿಯಾಗಲಿ ಎಂದು ಪ್ರಾರ್ಥಿಸಲಾಯಿತು.

# ಮನೆಗೆ ಹೊಕ್ಕಿದ್ದ ಉಡ ಸಂರಕ್ಷಿಸ ಸ್ನೇಕ್ ಮಹೇಶ್

**ಯಳಂದೂರು:** ಚಾಮರಾಜನಗರ ತಾಲೂಕಿನ ಮಹಂ ತಾಳಪುರ ಗ್ರಾಮದ ಸುರೇಶ್ ಎಂಬುವರ ಮನೆಗೆ ಹೊಕ್ಕಿದ್ದ ಉಡವನ್ನು ಶುಕ್ರವಾರ ಉರಗ ತಜ್ಞ ಸ್ನೇಕ್ ಮಹೇಶ್ ಸುರಕ್ಷಿತವಾಗಿ ಸಂರಕ್ಷಿಸಿ ಇದನ್ನು ಕಾಡಿಗೆ ಬಿಟ್ಟಿದ್ದಾರೆ.



ಈ ಸಂದರ್ಭದಲ್ಲಿ ಮಾತನಾಡಿದ ಅವರು ಉಡ ಒಂದು ಹಲ್ಲಿ ಜಾತಿಗೆ ಸೇ-ರಿದ ಪ್ರಾಣಿಯಾಗಿದೆ. ಇದು ಈಗ ಅಳಿವಿನಂಚಿನಲ್ಲಿರುವ ಪ್ರಾಣಿ ಪ್ರಬೇಧ ವಾಗಿದೆ. ಇದನ್ನು ಅನೇಕರು ಬೇಟೆಯಾಡುತ್ತಾರೆ. ಇದರ ಮಾಂಸ ಸೇವನೆಯಿಂದ ಶಕ್ತಿ ಹೆಚ್ಚುತ್ತದೆ ಎಂಬ ಮೂಢ ನಂಬಿಕೆ ಇದೆ. ಅಲ್ಲದೆ ಇದು ಮನೆಗೆ ಬಂದರೆ ಆ ಮನೆಗೆ ದರಿದ್ರ ಬರುತ್ತದೆ. ಅಶಾಂತಿ ಮೂಡುತ್ತದೆ. ಇದು ಅಶುಭ ಸೂಚಕವಾಗಿದೆ ಎಂಬ ಮೌಢ್ಯತೆ ಇಂದಿಗೂ ಜೀವಂತವಾಗಿದೆ. ಆದರೆ ಇದು ಶುದ್ಧ ಸುಳ್ಳಾಗಿದೆ. ಉಡ ಜೈವಿಕ ಅಸಮತೋಲನವನ್ನು ಕಾಪಾಡುವಲ್ಲಿ ಬಹುಮುಖ್ಯ ಪಾತ್ರ ನಿರ್ವಹಿಸುವ ಪ್ರಾಣಿಯಾಗಿದೆ. ಇದರಿಂದ ಯಾವುದೇ ತೊಂದರೆ ಯಾಗುವುದಿಲ್ಲ. ಇದು ಯಾರಿಗೂ ತೊಂದರೆ ನೀಡುವುದಿಲ್ಲ. ತನಗೆ ಬೇರೆ ಪ್ರಾಣಿಯಿಂದ ತೊಂದರೆಯಾದಲ್ಲಿ, ಬೇರೆ ಪ್ರಾಣಿ ತನ್ನನ್ನು ಬೇಟೆಯಾಡಲು ಬಂದಲ್ಲಿ ಇದು ಓಡಿ ಹೋಗುತ್ತದೆ. ಈ ಸಂದರ್ಭದಲ್ಲಿ ಸುರಕ್ಷಿತ ಜಾಗವನ್ನು ಅರಸಿ ಇದು ಮನೆಯನ್ನು ಹೊಕ್ಕುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ. ಹಾಗಾಗಿ ಸಾರ್ವಜನಿಕರು ಇದರ ಬಗ್ಗೆ ಇರುವ ಮೌಢ್ಯಗಳನ್ನು ದೂರ ಮಾಡಿಕೊಳ್ಳಬೇಕು. ಇದರಿಂದ ಭಯಪಡುವ ಅಗತ್ಯವಿಲ್ಲ. ಇದನ್ನು ಸಂರಕ್ಷಿಸುವ ಕೆಲಸವನ್ನು ಮಾಡಬೇಕು ಎಂದು ಸಲಹೆ ನೀಡಿದರು. ನಂತರ ಇದನ್ನು ಅರಣ್ಯ ಪ್ರದೇಶಕ್ಕೆ ಬಿಡಲಾಯಿತು.

RAJARATHA CYBER
All Online Services Under One Roof!
• Aadhaar, PAN Card, Voter ID, Ration Card
• e-Khata, Senior Citizen Card
& Other Government Services
• Address: Junior College Road, Nelamangala
Contact: 9886926812 for medicts

# ನಿಧನ ವಾರ್ತೆ



**ಯಳಂದೂರು:** ಪಟ್ಟಣದ ದೇವಾಂಗ ಬೀದಿಯ ನಿವಾಸಿ ಪಿ. ಬೃಂದಾ (70) ನಿಧನರಾದರು.

ಹಲವು ದಿನಗಳಿಂದ ಇವರು ಅನಾರೋಗ್ಯಕ್ಕೆ ತುತ್ತಾಗಿದ್ದರು. ಮೃತ-ರಿಗೆ ಪತಿ ಬಸವರಾಜಪ್ಪ ಸೇರಿದಂತೆ ಮೂವರು ಪುತ್ರಿಯರು ಒಬ್ಬ ಪುತ್ರನಿದ್ದಾನೆ. ಇವರ ಅಂತ್ಯಕ್ರಿಯೆಯು ತಾಲೂಕಿನ ಕೃಷ್ಣಯ್ಯನ ಕಟ್ಟೆ ಬಳಿ ಇರುವ ಜಮೀನಿನಲ್ಲಿ ಶುಕ್ರವಾರ ಮಧ್ಯಾಹ್ನ ಜರುಗಿತು.

# ಸರ್ಕಾರಿ ಪ್ರೌಢಶಾಲೆಯಲ್ಲಿ ಏಕ ಪೋಷಕ ಮಕ್ಕಳಿಗೆ ಉಚಿತ ನೋಟ್‌ಬುಕ್ ವಿತರಣೆ




**ಕೃಷ್ಣರಾಜಪೇಟೆ:** ತಾಲೂಕಿನ ಹ-ರಿಹರಪುರ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆ ವಿಭಾಗ ಏಕ ಪೋಷಕ ಮಕ್ಕಳಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಉಚಿತ ನೋಟ್‌ಬುಕ್ ವಿತರಣಾ ಕಾರ್ಯಕ್ರಮವನ್ನು ಅರ್ಥ-ಪೂರ್ಣವಾಗಿ ಹಮ್ಮಿಕೊಳ್ಳಲಾಗಿತ್ತು.

ಸಮಾಜ ಸೇವಕರಾದ ಆರ್.ಟಿ.ಓ. ಮಲ್ಲಿಕಾರ್ಜುನ್ ಅವರ ಆಪ್ತ ಸಹಾಯಕರಾದ ಗಂಜಿಗೆರೆ ಮಹೇಶ್ ಅವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಬಳಿಕ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಗ್ರಾಮೀಣ ಭಾಗದ ಜನರ ಹಾಗೂ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದೆ. ಅದರಲ್ಲೂ ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದಿರುವ ಏಕ ಪೋಷಕ ಮಕ್ಕಳ ಶಿಕ್ಷಣಕ್ಕೆ ಆಸರೆಯಾಗಿ ನಿಂತಿರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ. ವಿದ್ಯಾರ್ಥಿಗಳು ಇಂತಹ ಸೌಲಭ್ಯ ಗಳನ್ನು ಸದುಪಯೋಗಪಡಿಸಿ ಕೊಂಡು, ಶ್ರದ್ಧೆಯಿಂದ ವ್ಯಾಸಂಗ ಮಾಡುವ ಮೂಲಕ ಭವಿಷ್ಯದಲ್ಲಿ ಉನ್ನತ ಮಟ್ಟಕ್ಕೆ ಬೆಳೆಯಬೇಕು ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಸಮಾಜ ಸೇವಕರಾದ ಆರ್.ಟಿ.ಓ. ಮಲ್ಲಿಕಾರ್ಜುನ್ ರವರ ಆಪ್ತ ಸಹಾಯಕರಾದ ಗಂಜಿಗೆರೆ ಮಹೇಶ್, ಜಿಲ್ಲಾ ಜನಜಾಗೃತಿ ಸದಸ್ಯರಾದ ಕುಮಾರ್, ಪ್ರಭರ ಮುಖ್ಯ ಶಿಕ್ಷಕರಾದ ಸುಧಾ, ಮಂಜುಳ, ಶೃತಿ, ಸಂದೀಪ್, ಹ-ರಿಹರಪುರ ಮೇಲ್ವಿಚಾರಕರಾದ ಸಂಗೀತ, ಮಂಜುನಾಥ್, ಸಂಧ್ಯಾಮಣಿ, ಮೇಘನ, ದೀಪಿಕಾ, ಶ್ರೀಕಾಂತ್ ಚಿಮ್ಮಲ್, ಪತ್ರಕರ್ತರಾದ ಕಮನಹಳ್ಳಿ ಮಂಜುನಾಥ್, ಮನು, ಲೋಕೇಶ್.ವಿ, ಸಾಯಿಕುಮಾರ್, ಜಗದೀಶ್, ಸೇರಿದಂತೆ ಕಾಲೇಜಿನ ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಉಪಸ್ಥಿತ-ರಿದ್ದರು,

# ಕೆವಿಸಿ ಆಸ್ಪತ್ರೆಯಲ್ಲಿ ನವಜಾತ ಮಗು ಸಾವು:ಪೋಷಕರ ಪ್ರತಿಭಟನೆ

**ತಾಂಡವಪುರ:** ಶಸ್ತ್ರಚಿಕಿತ್ಸೆ ಮಾಡಿದ ಹೆರಿಗೆ ಮಾಡಿಸಿದ ಕೆಲವೇ ನಿಮಿಷದಲ್ಲಿ ನವಜಾತ ಶಿಶು ಸಾವಿಗೀಡಾಗಿದ ಘಟನೆ ಕೆವಿಸಿ ಆಸ್ಪತ್ರೆಯಲ್ಲಿ ನಡೆದಿದೆ.



ಮಗುವಿನ ಸಾವಿಗೆ ಆಸ್ಪತ್ರೆ ವೈದ್ಯರು ಮತ್ತು ಸಿಬ್ಬಂದಿಗಳ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿ ಆಸ್ಪತ್ರೆ ಮುಂಭಾಗದಲ್ಲಿ ಸಂತ್ರಸ್ತ ಪೋಷಕರು ಮತ್ತು ಸಂಬಂಧಿಕರು ಕೆಲವು ಕಾಲ ಪ್ರತಿಭಟಿಸಿ ಆಸ್ಪತ್ರೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು

ಮೈಸೂರಿನ ರೋಟರಿ ಶಾಲೆ ಬಳಿ ಇರುವ ಕೆವಿಸಿ ಆಸ್ಪತ್ರೆಗೆ ಬನ್ನೂರಿನ ಮಾಕನಹಳ್ಳಿ ಗ್ರಾಮದ ವಿನೋದ್ ಪತ್ನಿ ಕಾವ್ಯ ಎಂಬ ಮಹಿಳೆ ಹೆರಿಗೆಗೆಂದು ಕಳೆದ ಜೂನ್ 18 ರಂದು ಆಸ್ಪತ್ರೆಗೆ ದಾಖಲಾಗಿದ್ದರು. ಜೂನ್ 27 ಕ್ಕೆ ಹೆರಿಗೆ ದಿನಾಂಕವನ್ನ ವೈದ್ಯರು ಕೊಟ್ಟಿದ್ದರು.ತಪಾಸಣೆಗೆಂದು ಕಳೆದ ಗುರುವಾರ ಜೂನ್ 18 ರಂದು ಆಸ್ಪತ್ರೆಗೆ ಗರ್ಭಿಣಿ ಕಾವ್ಯರನ್ನು ಕರೆತಂದಿದ್ದಾರೆ. ಗರ್ಭಿಣಿ ಮಹಿಳೆಗೆ ಬಿಪಿ ಹೆಚ್ಚಿದೆ ಈಗಲೇ ಆಸ್ಪತ್ರೆಗೆ ದಾಖಲಿಸಿ ಎಂದು ವೈದ್ಯರಾದ ಸುಗುಣ ಶಾಂತಿ ಅವರು ಸೂಚಿಸಿದ್ದಾರೆ.ವೈದ್ಯರ ಸಲಹೆಯಂತೆ ದಾಖಲು ಮಾಡಿದ್ದಾರೆ.ಕಳೆದ ಗುರುವಾರದಿಂದ ಮಂಗಳವಾರದ ವರಗೂ ಹೆರಿಗೆ ಮಾಡದೆ

ವಿಳಂಬ ಮಾಡಿದ್ದಾರೆ ಪೋಷಕರ ಒತ್ತಾಯದ ಮೇರೆಗೆ ನಿನ್ನೆ ಹೆರಿಗೆ ಶಸ್ತ್ರಚಿಕಿತ್ಸೆ ಮಾಡಿ ಮಗುವನ್ನು ಹೊರ ತೆಗೆದಿದ್ದಾರೆ.ಆರಂಭದಲ್ಲಿ ಮಗು ಆರೋಗ್ಯವಾಗಿದ್ದು ಇದ್ದಕ್ಕಿಂದ ಹಾಗೆ ಮಗು ಸಾವನ್ನಪ್ಪಿದೆ ಎಂದು ವೈದ್ಯರು ತಿಳಿಸಿದ್ದಾರೆ.ಹೊಟ್ಟೆಯಲ್ಲಿದ್ದಾಗ ಮಗು ಚೆನ್ನಾಗಿತ್ತು ಹೆರಿಗೆ ಆದ ಬಳಿಕ ಯಾಕೆ ಹೀಗಾಯ್ತು.? ಕಳೆದ ವರ್ಷವೂ ಕೂಡ ಹೀಗೆ ಇದೇ ಆಸ್ಪತ್ರೆಯಲ್ಲಿ ಮೊದಲ ಮಗುವಿಗೆ ಆಸ್ಪತ್ರೆಗೆ ದಾಖಲಾಗಿದ್ದಾಗ ಅವಳಿ ಮಕ್ಕಳು ಸಾವಾನ್ನಪ್ಪಿದ್ದವು.ಈಗ ಎರಡನೇ ಹೆ-ರಿಗೆಯಲ್ಲೂ ಮಗು ಉಳಿಸಿಕೊಳ್ಳಲು ವೈದ್ಯೆ ಸುಗುಣ ಶಾಂತಿ ಅವರ ಸಲಹೆ ಸೂಚನೆ,ಮಾರ್ಗದರ್ಶನದಲ್ಲೇ ಎಲ್ಲಾ ರೀತಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು.ಇದ್ದಕ್ಕಿದ್ದಂತೆ ಮಗು ತೀರಿಕೊಂಡಾಗ ಪೋಷಕರು ಮತ್ತು ಅವರ ಸಂಬಂಧಿಕರು ಆಸ್ಪತ್ರೆ ಮುಂಭಾಗ ಕೆಲವು ಕಾಲ ಪ್ರತಿಭಟಿಸಿ ಆಸ್ಪತ್ರೆ ವಿರುದ್ಧ ದಿಕ್ಕಾಗ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಇದೇ ವೇಳೆ ದೇವರಾಜ ಠಾಣಾ ಪೋಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಪರಿಸ್ಥಿತಿ ತಿಳಿಗೊಳಿಸಿದರು.

ಕಾವ್ಯ ಎಂಬ ಗರ್ಭಿಣಿ ಮಹಿಳೆಗೆ ನಾನೇ ಚಿಕಿತ್ಸೆ ಕೊಡುತ್ತಿದ್ದೆ ಮೊದಲ ಮಗುವಿನಲ್ಲೂ ನಾನೇ ನೋಡಿದ್ದೆ.ಗರ್ಭಿಣಿ ಕಾವ್ಯಗೆ ಬಿಪಿ ಯಲ್ಲಿ ಏರುಪೇರು ಸಮಸ್ಯೆ ಇತ್ತು.

ಕಳೆದ ಗುರುವಾರ ನಾನೇ ಆಸ್ಪತ್ರೆಗೆ ದಾಖಲಿಸಿಕೊಂಡೆ.27 ಕ್ಕೆ ಹೆರಿಗೆ ಡೇಟ್ ಕೊಟ್ಟಿದ್ದೆ.ನಿನ್ನೆ ಕಾವ್ಯಳಿಗೆ ಹೊಟ್ಟೆನೋವು ಕಾಣಿಸಿಕೊಂಡಿದೆ.ಹೆರಿಗೆ ಮಾಡಿಸುವಾಗ ಆಕೆಗೆ ಬಿಪಿಯಲ್ಲಿ ಸಾಕಷ್ಟು ಏರಿಳಿತ ಉಂಟಾಗಿತ್ತು.ಹೆರಿಗೆ ಆದ ಬಳಿಕ ಸ್ವಲ್ಪ ಹೊತ್ತಲ್ಲೇ ಮಗು ಸಾವಾಗಿದೆ.ಇದರಲ್ಲಿ ಆಸ್ಪತ್ರೆ ಅಥವಾ ಮ್ಯಾನೇಜ್ಮೆಂಟ್ ನ ಯಾವುದೇ ತಪ್ಪಿಲ್ಲ ಪೋಷಕರು ಮಗು ಕಳೆದುಕೊಂಡ ದುಃಖದಲ್ಲಿ ನಮ್ಮ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ.

# ಬಿಜೆಪಿ ಸಂಘಟನೆಯನ್ನು ತಳಮಟ್ಟದಲ್ಲಿ ಇನ್ನಷ್ಟು ಬಲಪಡಿಸಿ:ಬಿ.ಕೆ.ನಾರಾಯಣಸ್ವಾಮಿ

## ಬಿಜೆಪಿ ಪಕ್ಷದ ದೇವನಹಳ್ಳಿ ಮಂಡಲದ ಒಬಿಸಿ ಮೋರ್ಚಾದ ಅಧ್ಯಕ್ಷರ ನೇಮಕ ಮತ್ತು ಪದಗ್ರಹಣ




**ದೇವನಹಳ್ಳಿ:** ಪಟ್ಟಣದ ಬಿಜೆಪಿ ಪಕ್ಷದ ಕಚೇ-ರಿಯಲ್ಲಿ ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಕ್ಷದ ಹಿಂದುಳಿದ ವರ್ಗಗಳ (ಒಬಿಸಿ) ಮೋರ್ಚಾವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಒಬಿಸಿ ಮೋರ್ಚಾ ತಾಲೂಕು ಅಧ್ಯಕ್ಷ ಬಿ.ಕೆ. ನಾರಾಯಣಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನೂತನ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಆದೇಶ ಪತ್ರಗಳನ್ನು ವಿತರಿಸಿ ಅಧಿಕೃತವಾಗಿ ಘೋಷಿಸಿದರು.

ಈ ವೇಳೆಯಲ್ಲಿ ಬಿಜೆಪಿ ಒಬಿಸಿ ಮೋರ್ಚಾ ತಾಲೂಕು ಅಧ್ಯಕ್ಷ ಬಿ.ಕೆ. ನಾರಾಯಣಸ್ವಾಮಿ ಮಾತನಾಡಿ ಕುಂದಾಣ, ತೂಬಗೆರೆ, ವಿಜಯಪುರ, ಚನ್ನರಾಯಪಟ್ಟಣ, ದೇವನಹಳ್ಳಿ ನಗರ, ಬಿಜ್ಜವಾರ ಹಾಗೂ ಆವತಿ ಸೇ-ರಿದಂತೆ ಏಳು ಮಹಾಶಕ್ತಿ ಕೇಂದ್ರಗಳಿಗೆ ದೇವನಹಳ್ಳಿ ಮಂಡಲ ಅಧ್ಯಕ್ಷ ಎಲ್.ಎನ್.ಅಂಬರೀಶ್ ಗೌಡ ನೇತೃತ್ವದಲ್ಲಿ ನೂತನ ಒಬಿಸಿ ಅಧ್ಯಕ್ಷರನ್ನು ನೇಮಕ ಮಾಡಲಾಗಿದ್ದು. ಪ್ರತಿಯೊಂದು ಭೂತ್ ಮಟ್ಟದಲ್ಲಿ ಕಾರ್ಯಕರ್ತರನ್ನು ಒಗ್ಗೂಡಿಸಿ ಸಂಘಟಿಸಿ, ಮತದಾರ-ರಿಗೆ ಇತರ ಪಕ್ಷಗಳ ಉಚಿತಗಳನ್ನು ನೀಡುವ ಆಮಿಷಗಳಿಂದ ಉಂಟಾಗುವ ಅನಾನುಕೂಲದ ಬಗ್ಗೆ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಉತ್ತಮ ನಾಯಕತ್ವದ ಆಡಳಿತದ ಕುರಿತು ಅರಿವು ಮೂಡಿಸಿ ಮುಂದಿನ ಚುನಾವಣೆಗಳಲ್ಲಿ ಗೆಲುವು ಸಾಧಿಸುವಂತೆ ಕಾರ್ಯಪ್ರವೃತ್ತರಾಗಬೇಕು ಎಂದು ಹೇಳಿದರು.

ವಿವಿಧ ರಾಜಕೀಯ ಪಕ್ಷಗಳಿಂದ 50ಕ್ಕೂ ಹೆಚ್ಚು ಮುಖಂಡರು ಮತ್ತು ಕಾರ್ಯಕರ್ತರು ಬಿಜೆಪಿ ಸೇರ್ಪಡೆಯಾಗಿದ್ದಾರೆ, ಅವರಿಗೆ ಪಕ್ಷದ ಧ್ವಜ ನೀಡಿ ಅಧಿಕೃತವಾಗಿ ಸ್ವಾಗತಿಸಿದ್ದೇವೆ. ಈ ಕಾರ್ಯಕ್ರಮದ ಮೂಲಕ ದೇವನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಸಂಘಟನೆಯನ್ನು ತಳಮಟ್ಟದಲ್ಲಿ ಇನ್ನಷ್ಟು ಬಲಪಡಿಸುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದರು.

ದೇವನಹಳ್ಳಿ ತಾಲೂಕು ಮಂಡಲದ ಅಧ್ಯಕ್ಷ ಅಂಬರೀಶಗೌಡ ಮಾತನಾಡಿ ತಾಲೂಕಿನ ಎಲ್ಲಾ ಗ್ರಾಮಗಳಲ್ಲಿರುವ ಪ್ರತಿ ಭೂತ್ ನಲ್ಲೂ ಒಬಿಸಿ ಮಂಡಲದ ಕಾರ್ಯಕರ್ತರನ್ನು ಸಂಘಟಿಸಬೇಕು ,ಇತರ ಪಕ್ಷಗಳು ಒಬಿಸಿಗೆ ಯಾವುದೇ ಪ್ರಾಮುಖ್ಯತೆ ನೀಡುವುದಿಲ್ಲ ಆದರೆ ಭಾರತ ದೇಶದ ಪ್ರಜೆಗಳು ಪ್ರಧಾನಿ ನರೇಂದ್ರ ಮೋದಿಯವರ ಸುಭೀಕ್ಷ ಆಡಳಿತದಲ್ಲಿದ್ದೇವೆ, ಯಾರಿಗೂ ಯಾವುದಕ್ಕೂ ಭಯ ಪಡುವ ಅವಶ್ಯಕತೆ ಇಲ್ಲ , ಬಿಜೆಪಿ ಪಕ್ಷಕ್ಕೆ ದೇಶದ ಅಭಿವೃದ್ಧಿ ಮೊದಲು ರಾಜಕಾರಣವಲ್ಲ ಎಂದು ಹೇಳಿದರು.

**ಹಿಂದುಳಿದ ಪದಾಧಿಕಾರಿಗಳು ಆಯ್ಕೆ:** ತಾಲೂಕು ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಸಂತೋಷ್, ಉಪಾಧ್ಯಕ್ಷರಾದ ನರಸಿಂಹ ಮೂರ್ತಿ, ಮುನೀಂದ್ರ, ಕಾರ್ಯದರ್ಶಿ ನಟರಾಜು, ರಮೇಶ್ ಬಾಬು, ನವೀನ್, ವಿನೋದ್ ಕುಮಾರ್, ಶಶಿಕುಮಾರ್, ಹೋಬಳಿ ಮಟ್ಟದಲ್ಲಿನ ಆವತಿ ಶಕ್ತಿ ಕೇಂದ್ರ ಅಧ್ಯಕ್ಷ ರಾಗಿ ಗುರುಮೂರ್ತಿ, ವಿಜಯಪುರ ಮಂಜುನಾಥ್, ದೇವನಹಳ್ಳಿ ನಗರ ಅಧ್ಯಕ್ಷ ರೂಪೇಶ್, ಕುಂದಾಣ ಶಕ್ತಿ ಕೇಂದ್ರ ಮುನಿರಾಜು, ಬಿಜ್ಜವಾರ ಶಕ್ತಿ ಕೇಂದ್ರ ಅಧ್ಯಕ್ಷ ವೆಂಕಟೇಶ್, ಚನ್ನರಾಯಪಟ್ಟಣ ಶಕ್ತಿ ಕೇಂದ್ರ ಅಧ್ಯಕ್ಷ ರಮೇಶ್, ತೂಬಗೆರೆ ಮಂಜುನಾಥ್ ಸೇರಿದಂತೆ ಅನೇಕರಿಗೆ ನೇಮಕಾತಿ ಪತ್ರ ನೀಡಿ ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಜಿ. ಚಂದ್ರಣ್ಣ,ಜಿಲ್ಲಾ ಅಧ್ಯಕ್ಷ ರಾಮಕೃಷ್ಣಪ್ಪ, ಬಿಜೆಪಿ ತಾಲೂಕು ಮಂಡಲ ಅಧ್ಯಕ್ಷ ಎನ್.ಎಲ್. ಅಂಬರೀಶ್ ಗೌಡ, ಒಬಿಸಿ ತಾಲೂಕು ಅಧ್ಯಕ್ಷ ಬಿ.ಕೆ.ನಾರಾಯಣಸ್ವಾಮಿ ಮುಖಂಡರುಗಳಾದ ಎಸ್.ಎಲ್.ಎನ್.ಅಶ್ವಥ್ ನಾರಾಯಣ್, ನಾಗವೇಣಿ, ಕೇಶವ ,ದೇಸು. ನಾಗಾರಾಜು, ಪ್ರಭು, ಸೇರಿದಂತೆ ಪಕ್ಷದ ಹಲವು ಪ್ರಮುಖ ನಾಯಕರು ಹಾಗೂ ಕಾರ್ಯಕತ

# ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಅರಸು ನೂತನ ಪ್ರತಿಮೆ ಮರು ಸ್ಥಾಪನೆ

**ತಾಂಡವಪುರ:** ಜಿಲ್ಲಾಧಿಕಾರಿ ಕಚೇರಿ ಎದುರಿನ ದಿವಂಗತ ಡಿ. ದೇವರಾಜ ಅರಸು ರವರ ಪ್ರತಿಮೆಯನ್ನು ತೆರವುಗೊಳಿಸಿ ಅದೇ ಸ್ಥಳಕ್ಕೆ ಅವರದೇ ಮುಖ ಚಹರೆ ಹೊಲುವ ನೂತನ ಪ್ರತಿಮೆಯನ್ನು ಮರುಸ್ಥಾಪನೆ ಮಾಡಲಾಯಿತು.



2025ರ ನ.3ರಂದು ಈ ಹಿಂದೆ ಅನಾವರಣಗೊಂಡಿದ್ದ ದೇವರಾಜ ಅರಸು ರವರ ಪ್ರತಿಮೆ ಅವರ ವ್ಯಕ್ತಿತ್ವಕ್ಕೆ ಮತ್ತು ಮುಖ ಭಾವಕ್ಕೆ ಹೋಲಿಕೆಯಾಗುತ್ತಿಲ್ಲ, ಹೊಂದಾಣಿಕೆ ಯಾಗುತ್ತಿಲ್ಲ ಎಂದು ವ್ಯಾಪಕ ಸಾರ್ವಜನಿಕರ ಟೀಕೆಗೆ ಗು-ರಿಯಾಗಿತ್ತು. ನಂತರ ಮೈಸೂರು ಜಿಲ್ಲಾಡಳಿತ ತಕ್ಷಣ ಬದಲಾವಣೆ ಮಾಡುವುದಾಗಿ ಸಾರ್ವಜನಿಕರಿಗೆ ವಿವಿಧ ಸಂಘ ಸಂಸ್ಥೆಗಳ ಮುಖಂಡರುಗಳಿಗೆ ಭರವಸೆ ನೀಡಿದರು

ಈಗಾಗಲೇ ಇರುವ ಪ್ರತಿಮೆಯಲ್ಲಿ ತಿದ್ದುಪಡಿ ಮಾಡಲು ಅವಕಾಶವಿದೆ ಎಂದು ಹೇಳಿದರು. ಆದರೆ, ಅದು ಸಾಧ್ಯವಾಗದ ಹಿನ್ನೆಲೆಯಲ್ಲಿ ನೂತನ ಪ್ರತಿಮೆಯನ್ನು ಕೆತ್ತಲು ಬಾಲರಾಮನ ಪ್ರತಿಮೆ ಸಿದ್ಧಪಡಿಸಿದ್ದ ಖ್ಯಾತ ಶಿಲ್ಪಿ ಅರುಣ್ ಯೋಗಿ ರಾಜ್ ಅವರಿಗೆ ಜವಾಬ್ದಾರಿ ನೀಡಲಾಯಿತು. ಅರುಣ್ ಯೋಗಿರಾಜ್ ಹಾಗೂ ಅವರ ತಂಡ ಸತತವಾಗಿ ಶ್ರಮವಹಿಸಿ, ದೇವರಾಜ ಅರಸು ಅವರ ಎಲ್ಲಾ ಪ್ರತಿಮೆಗಳ ಚಿತ್ರಗಳು, ಅವರು ಬಳಸುತ್ತಿದ್ದ ಬಟ್ಟೆಗಳು ಮತ್ತು ಅವರ ಸುತ್ತಳತೆ ಸೇರಿದಂತೆ ಎಲ್ಲಾ ಅಂಶಗಳ ಬಗ್ಗೆ ಅಧ್ಯಯನ ಮಾಡಿ, ನಂತರ ಒಂದು ಮಾಡೆಲ್ ನಿರ್ಮಿಸಿ ಅವರ ಕುಟುಂಬಸ್ಥರು ಹಾಗೂ ಜಿಲ್ಲಾಡಳಿತದ ಮುಂದೆ ಪ್ರಸ್ತುತ ಪಡಿಸಿದರು. ಈ ಮಾಡಲ್ ನೋಡಿದ ಎಲ್ಲರೂ ಒಪ್ಪಿಗೆ ಸೂಚಿಸಿದ ತದನಂತರ ಸುಮಾರು 6 ತಿಂಗಳ ಅವಧಿಯಲ್ಲಿ ಕೃಷ್ಣ ಶಿಲೆ ಬಳಸಿ, 10 ಅಡಿ ಎತ್ತರದ ದೇವರಾಜ ಅರಸು ಅವರ ಪ್ರತಿಮೆ ಕೆತ್ತನೆ ಕಾರ್ಯ ಪೂರ್ಣಗೊಳಿಸಲ್ಪಟ್ಟಿದೆ.

**ಹಳೆಯ ಪ್ರತಿಮೆ ಮುರಿದು ಬಿತ್ತು :** ಹೊಸ ಪ್ರತಿಮೆಯನ್ನು ಸ್ಥಾಪಿಸುವ ಮುನ್ನ ಹಳೆಯ ಪ್ರತಿಮೆಯನ್ನು ಕ್ರೇನ್ ಸಹಾಯದಿಂದ ತೆರವುಗೊಳಿಸುವ ವೇಳೆ ಅದು ಆಕಸ್ಮಿಕವಾಗಿ ಕ್ರೇನ್ ಸರಪಳಿ ಕಳಚಿಕೊಂಡು ಪ್ರತಿಮೆಯೂ ಕೆಳಗೆ ಬಿದ್ದು ಮುರಿದುಹೋಯಿತು. ಸುಮಾರು 92 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿದ್ದ ಈ ಪ್ರತಿಮೆಯ ಬಗ್ಗೆ ಜನಪ್ರತಿನಿಧಿಗಳು, ದೇವರಾಜ ಅರಸು ಅವರ ಕುಟುಂಬದ ಸದಸ್ಯರು ಹಾಗೂ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದರು. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪ್ರತಿಮೆಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿ ದೇವರಾಜ ಅರಸು ಅವರ ನೈಜ ರೂಪಕ್ಕೆ ಹತ್ತಿರವಾಗಿರುವ ಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಿದ್ದರು. ಇದರ ಬೆನ್ನಲ್ಲೇ ಮೈಸೂರು ಜಿಲ್ಲಾಡಳಿತ ಹೊಸ ಪ್ರತಿಮೆ ಸ್ಥಾಪಿಸುವ ನಿರ್ಧಾರ ಕೈಗೊಂಡು ಈಗ ದಿವಂಗತ ದೇವರಾಜು ಅರಸು ರವರ ಪ್ರತಿಮೆ ಮರು ಸ್ಥಾಪನೆಯಾಗುತ್ತಿರುವುದು ಸಾರ್ವ ಜನಿಕರು ದೇವರಾಜ್ ಅರಸು ಅಭಿಮಾನಿಗಳು ಹಾಗೂ ವಿವಿಧ ಸಂಘ ಸಂಸ್ಥೆಗಳ ಮುಖಂಡರಲ್ಲಿ ಸಂತಸ ಉಂಟು ಮಾಡಿದಂತಾಗಿದೆ ಮೈಸೂರು ಜಿಲ್ಲಾಡಳಿತದ ಮನವಿ ಮೇರೆಗೆ ನೂತನ ಪ್ರತಿಮೆಯನ್ನು ನೀಡಲಾಯಿತು. ಅದನ್ನು ಹಲವು ತಿಂಗಳ ಪರಿಶ್ರಮದಿಂದ ವೈಭವಪೂರಿತವಾಗಿ ಕೆತ್ತನೆ ಮಾಡಲಾಗಿದೆ. ಇಂತಹದೊಂದು ಅವಕಾಶ ನೀಡಿದ ಎಲ್ಲರಿಗೂ ಅಭಿನಂದಿಸುತ್ತೇನೆ. ಎಂದು ಮೈಸೂರು ಜಿಲ್ಲಾ ಆಡಳಿತಕ್ಕೆ ಅರುಣ್ ಯೋಗಿರಾಜ್, ಶಿಲ್ಪಿ ತಿಳಿಸಿದರು

# "ಶ್ರಾವಣಿ" ವೆಬ್ ಸೀರಿಸ್‌ಗೆ ಅದ್ದೂರಿ ಚಾಲನೆ




**ಬೆಂಗಳೂರು:** ಟಿ ಎಂಪಿ ಪಿಕ್ಚರ್ಸ್ ರವರ ಅಶೋಕ್ ಮೋದಿ ನಿರ್ಮಾಣದ,ಯವ ಪ್ರತಿಭೆ ವಿಕ್ರಂ ಕುಮಾರ್ ನಿರ್ದೇಶನದಲ್ಲಿ"ಶ್ರಾವಣಿ" ವೆಬ್ ಸೀರಿಸ್ ರೀಲೀಸ್ ಇವೆಂಟ್ ನ್ನು ಮಾಗಡಿ ರಸ್ತೆಯ ಕಾಮಕ್ಷಿಪಾಳ್ಯದ ವಿಕ್ಟರಿ ಸಿನಿಮಾಸ್ ನಲ್ಲಿ ಅದ್ದೂ-ರಿಯಾಗಿ ಪ್ರೀಮಿಯರ್ ಶೋ ಆಯೋಜಿಸಲಾಗಿತ್ತು.

ಬಹುತೇಕ ಹೊಸಬರಿರುವ ಈ ವೆಬ್ ಸೀರಿಸ್ ನಲ್ಲಿ ಹೊಸತನ, ಸುಮಧುರ ಹಾಡು,ಉತ್ತಮ ಹಿನ್ನಲೆ ಸಂಗೀತ, ಕಥೆಗೆ ಹೊಂದುವ ಸುಂದರ ಲೋಕೇಶನ್ ನಲ್ಲಿ 40 ನಿಮಿಷಗಳ " ಶ್ರಾವಣಿ " ನೋಡುಗರಿಗೆ ಸಮಯ ಕಳೆದಿದ್ದೆ ಗೊತ್ತಾಗದ ರೀತಿಯಲ್ಲಿ ಅದ್ಭುತವಾಗಿ ಮೂಡಿ ಬಂದಿದ್ದು ಸಿನಿ ಪ್ರಿಯರ ಮೆಚ್ಚುಗೆಗೆ ಪಾತ್ರವಾಗಿದೆ."ಶ್ರಾವಣಿ" ಭಾಗ 2 ರ ಕೌತುಕಕ್ಕೂ ಕಾರಣವಾಗಿದೆ .

ಓಟಿಟಿ ಹಾಗೂ ಯೂಟ್ಯೂಬ್ ನಲ್ಲಿ ಲಭ್ಯವಾಗಲಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ

ಲವರ್ ಬಾಯ್ ಪಾತ್ರದಲ್ಲಿ ಸಿನಿಮಾ ಟೆಕ್ನಿಷಿಯನ್ ಆಗಿರುವ ಹರ್ಷ ಕಲ್ಯಾಣ್ ರವರ ಮುಗ್ದತೆ, ಪಾತ್ರಕ್ಕೆ ಜೀವ ತುಂಬಿತ್ತು. ಹಳ್ಳಿಹುಡುಗಿ ಪಾತ್ರದಲ್ಲಿ ರಾಣಿ ಎಂ ಅಂಗಡಿ,ಗಮನ ಸೆಳೆದರು.ಸಹಕಲಾವಿದರಾಗಿ ರಂಗನಾಥ್ ಬೃಂದ ರಾಮ್, ಶ್ರೀ ವೈಷ್ಣವ್, ದೀಪ ಕೆಎನ್ , ಹೇಮಂತ್, ಗಮನಸೆಳೆದರು.

"ನನಗಿನ್ನು ನಿನ್ನ ನಯನಾನೇ ದ್ಯಾನ ಬದಲಾದ ಪ್ರೇಮ ಕಾಯಲಿ ನನ್ನ " ಸುಂದರ ಕಾವ್ಯ ಅದ್ಭುತವಾಗಿ;, ಹಾಡು ಮೂಡಿ ಬಂದಿದ್ದು ಮತ್ತೆ ಮತ್ತೆ ಮೆಲುಕು ಹಾಕುವಂತೆ ಮೂಡಿಬಂದಿದೆ

ಮುಖ್ಯ ಅತಿಥಿ ಅಗಮಿಸಿದ್ದ ಸಿನಿಮಾ ಪಿಆರ್ ಓ ಸುಧೀಂದ್ರ ವೆಂಕಟೇಶ್ ಮಾತನಾಡಿ ಹೊಸಬರ ಚಿತ್ರಕ್ಕೆ ನಿರ್ಮಾಪಕರು ಬಂಡವಾಳ ಹೂಡಿಕೆ ಮಾಡಲು ಹಿಂಜರಿಯುತ್ತಾರೆ ಅದರೆ ಈ ಯುವ ಪ್ರತಿಭೆಗಳನ್ನು ಗುರುತಿಸಿ ಬಂಡವಾಳ ಹೂಡಿರುವ ನಿರ್ಮಾಪಕ ಅಶೋಕ್ ಮೋದಿರವರು ಹಾಕಿರುವ ಬಂಡವಾಳ ಖಂಡಿತ ವಾಪಸ್ಸು ಬರಲಿದೆ ಎಂದು ಹೇಳಿ ಹೊಸ ನಿರ್ದೇಶಕರು ಕಲಾವಿದರು, ತಂತ್ರಜ್ಞರಿಗೆ, ಸಿನಿಪ್ರಿಯರು ಪ್ರೋತ್ಸಾಹ ನೀಡಿ ಬೆಳಸಿ ಎಂದರು.

ಮುಖ್ತ ಅತಿಥಿ ಹಾಗೂ ಸಮಾಜಸೇವಕ ವರ್ತೂರು ಸುನೀಲ್ ಕುಮಾರ್ ಮಾತನಾಡಿ ಶ್ರಾವಣಿ ವೆಬ್ ಸೀರೀಸ್ ಸಧಬಿರುಚಿಯ ಚಿತ್ರವಾಗಿದ್ದು ಹಳ್ಳಿ ಯುವಕನ ಮುಗ್ದ ಪ್ರೀತಿಯ ತೊಳಲಾಟ ,ಪ್ರೀತಿಗಾಗಿ ಹಂಬಲ, ಮನಸ್ಸಿನಲ್ಲಿ ಟ್ಟುಕೊಂಡು ವ್ಯಕ್ತಪಡಿಸದೇ ಅಂತ್ಯಕಾಣುವ ಒನ್ ಸೈಡ್ ಲವ್, ಕೊನೆಯಲ್ಲಿ ಅದರೆ ಶ್ರಾವಣಿ ಭಾಗ 2 ತೆರೆಮೇಲೆ ಬರಲಿದೆ ಎಂದು ತೋರಿಸಿರುವುದ-ರಿಂದ ಮತ್ತಷ್ಟು ಕೌತುಕ ಎದುರಾಗಿದ್ದು ಪ್ರೇಕ್ಷಕರ ಭಾಗ 2 ನಿರೀಕ್ಷೆ ಹೆಚ್ಚಾಗುವಂತೆ ಮಾಡಿದೆ ಎಂದರು.

ಈ ಸಂಧರ್ಭದಲ್ಲಿ ವ್ಯವಸ್ಥಾಪಕರಾದ ಅವಿರಾಜ್ ಎಂ , ಚಿತ್ರನಟರಾದ ಬಾಲ್ ರಾಜ್ ವಾಡಿ ಸುನಂದಾ ಅಶ್ವಿನ್,ಚಲನಚಿತ್ರ ನಟಿ ಅಶ್ವಿತಾ ಹೆಗ್ಡೆ ನಿರ್ದೇಶಕರಾದ ರಾಮೋಹಳ್ಳಿ ಜಗನ್ನಾಥ್ ಸಾಯಿ ಸಾಗರ್ ,ಕಲಾವಿದರಾದ ಅರ್ಜುನ್, ದೀಪಮ್ಮ ಹಿರಿಯ ಕಲಾವಿದರು ಸೇರಿದಂತೆ ಹಲವಾರು ರೀಲ್ಸ್ ಕಲಾವಿದರು ಭಾಗವಹಿಸಿದ್ದರು.

# ನನ್ನನ್ನು ಕ್ಷಮಿಸಿ ಬಿಡು ಅಮ್ಮ: ವಿಡಿಯೋ ಮಾಡಿಟ್ಟು ಬಾವಿಗೆ ಹಾರಿದ ನೀಟ್ ಆಕಾಂಕ್ಷಿ

**ಮುಂಬೈ:** ಮಹಾರಾಷ್ಟ್ರದ ಹಿಂಗೋಲಿಯಲ್ಲಿ 18 ವರ್ಷದ ನೀಟ್ ಆಕಾಂಕ್ಷಿ ಬಾವಿಗೆ ಹಾರಿ ಆತ್ಮಹತ್ಯೆಗೆ ಶರಣಾಗಿದ್ದಾನೆ. ಆತ್ಮಹತ್ಯೆ ಮಾಡಿಕೊಳ್ಳುವ ಸ್ವಲ್ಪ ಸಮಯದ ಮುನ್ನ ವಿಡಿಯೋ ಮಾಡಿದ್ದು, ಅದರಲ್ಲಿ ಕೈಮುಗಿದು ಕ್ಷಮಿಸಿ, ಅಮ್ಮ ಎಂದು ಮನವಿ ಮಾಡಿದ್ದಾನೆ.



ಸುಶೀಲ್ ಧಾಗೆ ಆತ್ಮಹತ್ಯೆಗೆ ಶರಣಾದ ಯುವಕ. ಈತ ಜೂ.21 ರಂದು ನೀಟ್ 2026 ಮರು ಪರೀಕ್ಷೆಗೆ ಹಾಜರಾಗಿದ್ದ. ಆತ್ಮಹತ್ಯೆಗೂ ಮುನ್ನ, 33 ಸೆಕೆಂಡುಗಳ ವಿಡಿಯೋ ಮಾಡಿ, ಕುಟುಂಬಸ್ಥರಿಗೆ ಕಳುಹಿಸಿದ್ದಾನೆ. ಆ ವಿಡಿಯೋದಲ್ಲಿ ತನ್ನ ತಾಯಿಗೆ ಭಾವನಾತ್ಮಕ ಸಂದೇಶ ರವಾನಿಸಿದ್ದಾನೆ.

ವಿಡಿಯೋದಲ್ಲಿ, ಅಮ್ಮ, ನಾನು ಇಂದು ನನ್ನ ಪ್ರಾಣವನ್ನೇ ಕಳೆದುಕೊಳ್ಳಲಿದ್ದೇನೆ. ದಯವಿಟ್ಟು ಚಿಂತಿಸಬೇಡಿ. ನನ್ನ ಮುಂದಿನ ಜನ್ಮದಲ್ಲಿ ಮತ್ತೆ ನಿಮ್ಮ ಮಗನಾಗಿಯೇ ಹುಟ್ಟುತ್ತೇನೆ. ನಿಮಗೆ ಈ ರೀತಿಯ ನೋವುಂಟುಮಾಡುವುದಿಲ್ಲ. ನೀವು ಸುಮೇಧ್ ಜೊತೆ ಚೆನ್ನಾಗಿರಿ. ನನ್ನ ಬಗ್ಗೆ ಚಿಂತಿಸಬೇಡಿ. ನನಗೆ ತೀವ್ರ ನೋವುಂಟಾಗಿದೆ. ನನಗೆ ಏನೂ ಮಾಡಲು ಸಾಧ್ಯವಿಲ್ಲ. ನನಗೆ ಏನೂ ಅರ್ಥವಾಗುತ್ತಿಲ್ಲ. ನನ್ನನ್ನು ಕ್ಷಮಿಸಿ ಎಂದು ಹೇಳಿಕೊಂಡಿದ್ದಾನೆ.

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ ಪರೀಕ್ಷೆಯನ್ನು ಮೇ 3 ರಂದು ನಡೆಸಲಾಗಿತ್ತು. ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪ ಕೇಳಿ ಬಂದ ಬೆನ್ನಲ್ಲೇ ಮೇ 12 ರಂದು ಆ ಪರೀಕ್ಷೆಯನ್ನು ರದ್ದುಗೊಳಿಸಲಾಗಿತ್ತು. ಬಳಿಕ ಜೂನ್ 21 ರಂದು ಮರು ಪರೀಕ್ಷೆ ನಡೆಸಲಾಗಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ತನಿಖೆಯನ್ನು ಕೇಂದ್ರ ತನಿಖಾ ದಳ (ಸಿಬಿಐ) ನಡೆಸುತ್ತಿದೆ.

ಈ ಘಟನೆ ಕುರಿತು ಶಿಕ್ಷಣ ತಜ್ಞರು ಮತ್ತು ಮನೋವೈದ್ಯರು ಕಳವಳ ವ್ಯಕ್ತಪಡಿಸಿದ್ದು, ವಿದ್ಯಾರ್ಥಿಗಳ ಮೇಲೆ ಅತಿಯಾದ ನಿರೀಕ್ಷೆ ಮತ್ತು ಪರೀಕ್ಷಾ ಒತ್ತಡವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಪೋಷಕರು, ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರಗಳು ಹೆಚ್ಚಿನ ಗಮನ ಹರಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಸುಶೀಲ್ ಧಾಗೆಯ ಸಾವಿನಿಂದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಸ್ಥಳೀಯರಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ.